## ಸಿಪಾಯಿ ಕಲ್ಲುಕಟ್ಟು

ಇಲ್ಲಿರುವ ತೂಕದ ಕಲ್ಲುಕಟ್ಟು ವಾಸ್ತವವಾಗಿ ಕಲ್ಲುಗಳಿಂದ ಮಾಡಿದ್ದಲ್ಲ. ಅದನ್ನು ಫಿರಂಗಿಗಳನ್ನು ಮಾಡುವ ಮಿಶ್ರಲೋಹದಿಂದ ತಯಾರಿಸಲಾಗಿದೆ. ಈ ಕಲ್ಲುಕಟ್ಟಿನ ಒಟ್ಟು ತೂಕ 250 ಕೆ.ಜಿ (ಸುಮಾರು 500 ಪೌಂಡ್‌ಗಳು). ಹಿಂದಿನ ಕಾಲದಲ್ಲಿ ಯುವಕರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವಾಗ ಅವರ ಶಕ್ತಿ ಸಾಮರ್ಥ್ಯವನ್ನು ಈ ತೂಕದ ಕಲ್ಲುಕಟ್ಟು ಎತ್ತಿಸಿ ಅಳೆಯಲಾಗುತ್ತಿತ್ತು. ಈ ಕಲ್ಲುಕಟ್ಟಿನ ಎಲ್ಲಾ ಲೋಹದ ತುಂಡುಗಳನ್ನು ಒಟ್ಟಿಗೆ ಬೆಸೆದು ಮೇಲ್ಭಾಗದಲ್ಲಿ ಹಿಡಿಕೆ (Handle) ಯೊಂದನ್ನು ಕೂರಿಸಿ ಎತ್ತುವ ವ್ಯವಸ್ಥೆ ಮಾಡಲಾಗಿದೆ. ಈ ಸಿಪಾಯಿ ಕಲ್ಲುಕಟ್ಟು ಇರುವುದು ಹೈದರಾಬಾದ್‌ನ ಗೋಲ್ಕೊಂಡ ಕೋಟೆಯೊಳಗೆ. ಇದನ್ನು ಎತ್ತುವುದು ಅಸಾಧ್ಯವೆಂಬುದೇ ಎಲ್ಲರ ನುಡಿ. ಅಲ್ಲಿಗೆ ಭೇಟಿ ಕೊಟ್ಟಾಗ ಒಮ್ಮೆ ಎತ್ತಿ ನೋಡಿ.

■ **ಎಸ್. ಓಂಕಾರಯ್ಯ, ತವನಿಧಿ, ದಾವಣಗೆರೆ**



## ಕಸದಿಂದ ರಸ

ನಿರುಪಯುಕ್ತ ವಸ್ತುಗಳಿಂದಲೂ ಸುಂದರವಾದ ಕಲಾಕೃತಿ ರಚಿಸಬಹುದು ಎನ್ನುತ್ತಾರೆ ನಾಗೇಶ ಕರಜಗಿ ಮತ್ತು ಖಾಜಪ್ಪಾ ಸಿಂಗೆ. ಅದಕ್ಕೆ ಸಾಕ್ಷಿ ಅವರು ತಯಾರಿಸಿದ ಈ ಚಿತ್ರದಲ್ಲಿರುವ ವಿಶಿಷ್ಟ ಕಲಾಕೃತಿ. ಸಿಗರೇಟ್ ಡಬ್ಬಿಗಳು ಮತ್ತು ಬೆಂಕಿಕಡ್ಡಿಗಳನ್ನು ಬಳಸಿ ನಿಜವಾದ ಗೋಳಗುಮ್ಮಟಕ್ಕೆ ಸೆಡ್ಡು ಹೊಡೆಯುವಂತೆಯೇ ಕಲಾಕೃತಿಯನ್ನು ಮಾಡಿದ್ದಾರೆ. ವಿಜಯಪುರ ಜಿಲ್ಲೆ ಕಗ್ಗೋಡ ಗ್ರಾಮದಲ್ಲಿ ಏರ್ಪಡಿಸಿದ್ದ 'ಭಾರತ ವಿಕಾಸ ಸಂಗಮ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇದು ಜನಮನ್ನಣೆ ಗಳಿಸಿದ್ದು, ಆ ಕಲಾವಿದರಿಗೆ ಇದು ಸ್ಫೂರ್ತಿಯ ಸೆಲೆಯಾಗಿದೆ.

■ **ಪಂಡಿತರಾವ ಪಾಟೀಲ, ಸರಸಂಬಾ**





## ಡಿಫರೆಂಟ್ ರೊಟ್ಟಿ ಮೇಕರ್

ಮನೆಗಳಲ್ಲಿ ರೊಟ್ಟಿ ಅಥವಾ ಚಪಾತಿ ಮಾಡಲು ಹಿಂದಿನ ದಿನಗಳಲ್ಲಿ ಈ ಚಿತ್ರದಲ್ಲಿ ಕಾಣುವಂತಹ ರೊಟ್ಟಿ ತಯಾರಿಕ ವಸ್ತುವನ್ನು ಬಳಸುತ್ತಿದ್ದರು. ಇದನ್ನು ರೊಟ್ಟಿ ಮೇಕರ್ ಅಂತಲೇ ಕರೆಯಲಾಗುತ್ತದೆ. ಕೈಯಲ್ಲಿ ರೊಟ್ಟಿ ತಟ್ಟುತ್ತಾ ಕೂರಲು ಪುರುಸೊತ್ತಿಲ್ಲದೆ ಕಷ್ಟಪಡುವ ಬದಲು ಇದರಲ್ಲಿ ಹಿಟ್ಟನ್ನಿಟ್ಟು ಒತ್ತಿದರೆ ರೊಟ್ಟಿ ತಯಾರಿಸುವುದು ಬಲು ಸುಲಭ. ಕರಾವಳಿ ಹಾಗೂ ಮಲೆನಾಡ ಜನರು ಹಪ್ಪಳ ತಯಾರಿಕೆಗೂ ಇದನ್ನೇ ಬಳಸುತ್ತಾರೆ. ನೂರು ವರ್ಷಗಳಷ್ಟು ಹಳೆಯದಾದ ಇದು ಕಾಸರಗೋಡಿನ ಕುಂಬ್ಳೆ ಸಮೀಪದ ಎಡನಾಡು ಶ್ಯಾಮಭಟ್ಟರ ಮನೆಯಲ್ಲಿದೆ.

■ **ಗೀತಾ ಬರ್ಲ, ಅಮ್ಮೈ**